ವುದರಿಂದ, ಇಂಧನಗಳ ಸಾಮಗ್ರಿಗಳ ಬೆಲೆಯಲ್ಲಿ ಹೆಚ್ಚಳವಿರುವುದರಿಂದ, ಟೈರು, ಟ್ಯೂಬು, ಜಾಸೀಸ್ ಮತ್ತು ಬಿಡಿ ಭಾಗಗಳು ಮತ್ತು ಇತರೆ ಉತ್ಪನ್ನಗಳ ಬೆಲೆಗಳಲ್ಲಿ ಹೆಚ್ಚಳವಾಗಿರುವುದರಿಂದ ಮತ್ತು ಅದಕ್ಕೆ ಸರಿಸಮವಾಗಿ ಸಾರಿಗೆ ದರಗಳನ್ನು ಹೆಚ್ಚಿಸದೆ ಇರುವುದರಿಂದ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಒಂದು ವರ್ಷಕ್ಕೆ ಸುಮಾರು 3 ಕೋಟಿ ರೂಗಳನ್ನು ವಿದ್ಯಾರ್ಥಿಗಳಿಗೆ ಮತ್ತು ಪತ್ರಿಕೋದ್ಯಮಿಗಳಿಗೆ ಇತ್ಯಾದಿ ರಿಯಾಯಿತಿ ಪಾಸುಗಳನ್ನು ಕೊಡುವುದರಿಂದ ಸಂಸ್ಥೆಯು ನಷ್ಟವನ್ನು ಹೊಂದುತ್ತಿದೆ. ಸರಕಾರವು ಸಂಸ್ಥೆಗೆ ಭರಿಸಬೇಕಾದಂಥ ಈ ವೆಚ್ಚವನ್ನು ಪರಿಶೀಲನೆ ಮಾಡುತ್ತಿದೆ.

ಇ) ಸಂಸ್ಥೆಯ ಆಡಳಿತ ವರ್ಗವು ವಾಹನದ ಹೆಚ್ಚಿನ ಉಪಯೋಗದಿಂದ ಪ್ರತಿ ಕಿಲೋ ಮೀಟರಿಗೆ ತಗಲುವ ವೆಚ್ಚವನ್ನು ಕಡಿಮೆ ಮಾಡಲು ವರ್ಷದಿಂದ ವರ್ಷಕ್ಕೆ ಪ್ರಯತ್ನ ಮಾಡುತ್ತಿದೆ. ಮತ್ತು ವಾಹನಕ್ಕೆ ಬೇಕಾಗುವ ಸಿಬ್ಬಂದಿ ವರ್ಗವನ್ನು ಕಡಿಮೆ ಮಾಡುವುದರಿಂದ, ಮತ್ತು ನಿರ್ದಿಷ್ಟ ರೀತಿಯಲ್ಲಿ ಇಂಧನವನ್ನು ಬಳಸಿ ಅದಕ್ಕೆ ತಗಲುವ ವೆಚ್ಚವನ್ನು ಕಡಿಮೆ ಮಾಡುವುದರಿಂದ ಮತ್ತು ಟೈರು, ಟ್ಯೂಬುಗಳು ಹೆಚ್ಚು ಕಾಲ ಬಾಳಿಕೆ ಬರುವಂತೆ ಮಾಡಲು ಪ್ರಯತ್ನಿಸುತ್ತಿದೆ. ಓಡಿಸಲು ಯೋಗ್ಯವಲ್ಲದ ವಾಹನಗಳನ್ನು ಬದಲು ಮಾಡಿ ಬೇರೆ ಹೊಸ ವಾಹನಗಳನ್ನು ಕೊಂಡು ಆ ಮೂಲಕ ನಷ್ಟವನ್ನು ತುಂಬಿಕೊಳ್ಳಲು ಪ್ರಯತ್ನಿಸುತ್ತಿದೆ. ಮೇಲ್ವಿಚಾರಣೆ ಮತ್ತು ತನಿಖೆಗಳನ್ನು ಆಗಾಗ್ಗೆ ಹೆಚ್ಚಿಸಿ ಸಂಸ್ಥೆಗೆ ಸೋರಿಹೋಗುತ್ತಿರುವ ಹಣವನ್ನು ಕಡಿಮೆ ಮಾಡಲು ಪ್ರಯತ್ನ ಮಾಡುತ್ತಿದೆ. ರಸ್ತೆ ಸಾರಿಗೆ ಸಂಸ್ಥೆಯು ತನ್ನ ಸಂಸ್ಥೆಯನ್ನು ಐದು ಪ್ರಾದೇಶಿಕ ವಿಭಾಗಗಳಾಗಿ ವಿಂಗಡಿಸಿ ಪ್ರತಿಯೊಂದು ಪ್ರಾದೇಶಿಕ ವಿಭಾಗಕ್ಕೂ ಒಬ್ಬ ಪ್ರಾದೇಶಿಕ ಅಧಿಕಾರಿಯನ್ನು ನೇಮಿಸಲಾಗಿದೆ. ಪ್ರತಿ ಪ್ರಾದೇಶಿಕ ವಿಭಾಗಕ್ಕೂ ಅವುಗಳ ಮುಂದೆ ಕಾಣಿಸಿರುವ ವಿಭಾಗಗಳ ಮೇಲಿನ ಹತೋಟಿಯನ್ನು ವಹಿಸಲಾಗಿದೆ.

ಈ) ಮೇಲಿನ (ಇ) ಪ್ರಶ್ನೆಗೆ ಕೊಟ್ಟಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಉ) —ಡಿಟೋ—

1. **ಬೆಂಗಳೂರು ಗ್ರಾಮಾಂತರ ಪ್ರದೇಶ ವಿಭಾಗ**
   ಅ) ಬೆಂಗಳೂರು ವಿಭಾಗ ಆ) ಕೋಲಾರ ವಿಭಾಗ
2. **ಬೆಂಗಳೂರು ಮೆಟ್ರೋಪಾಲಿಟನ್ ಪ್ರದೇಶ**
   ಅ) ಬೆಂಗಳೂರು ನಗರ ಸಾರಿಗೆ ಸಂಸ್ಥೆ
3. **ಮೈಸೂರು ಪ್ರಾದೇಶಿಕ ವಿಭಾಗ**
   ಅ) ಮೈಸೂರು ವಿಭಾಗ ಆ) ಹಾಸನ ವಿಭಾಗ ಇ) ಮಂಗಳೂರು ವಿಭಾಗ
4. **ಬೆಳಗಾಂ ಪ್ರದೇಶ**
   ಅ) ಹುಬ್ಬಳ್ಳಿ ವಿಭಾಗ ಆ) ಬೆಳಗಾಮ್ ವಿಭಾಗ ಇ) ಬಿಜಾಪುರ ವಿಭಾಗ
   ಈ) ಉತ್ತರ ಕನ್ನಡ ವಿಭಾಗ (ಸಿರಸಿ)
5. **ಗುಲ್ಬರ್ಗ ಪ್ರದೇಶ**
   ಅ) ಗುಲ್ಬರ್ಗ ವಿಭಾಗ ಆ) ರಾಯಚೂರು ವಿಭಾಗ ಇ) ಬಳ್ಳಾರಿ ವಿಭಾಗ

ವಿಷಯ. ಕಾರ್ಯಕಾರಿಯಿಂದ ವಿಧಾನ ಮಂಡಲದ ಬೇರ್ಪಡೆ.

ಪ್ರಶ್ನೆ 10(12) ಶ್ರೀ ಗೋಯಿಂದ ಪಿ. ಒಡೆಯರಾಜ್ (ಕಮಲಾಪುರ).—ಮಾನ್ಯ ಕಾನೂನು ಸಂಸದೀಯ ವ್ಯವಹಾರಗಳ ಹಾಗೂ ವಸತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ.—

ಎ) ಸಚಿವ ಸಂಪುಟವು ವಿಧಾನ ಮಂಡಲವನ್ನು ಕಾರ್ಯಕಾರಿಯಿಂದ ಬೇರ್ಪಡಿಸಲು ನಿರ್ಧರಿಸಿದೆಯೇ ;

ಬಿ) ಹಾಗಿದ್ದಲ್ಲಿ, ಯಾವಾಗ, ಸಂಬಂಧಪಟ್ಟ ಆದೇಶದ ಪ್ರತಿಯನ್ನು ದಯವಿಟ್ಟು ಒದಗಿಸುವುದು ;

ಸಿ) ಹಾಗಿಲ್ಲದಿದ್ದರೆ, ಸರ್ಕಾರವು ಬದ್ಧವಾಗಿರುವಾಗ್ಯೂ ನಿರ್ಣಯ ತೆಗೆದುಕೊಳ್ಳಲ್ಪಟ್ಟಿಲ್ಲವೇಕೆ ?

ಉತ್ತರ.—ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರಗಳ ಹಾಗೂ ವಸತಿ ಮಂತ್ರಿಗಳು).—

ಎ) ವಿಧಾನ ಮಂಡಲವು ಯಾವಾಗಲೂ ಕಾರ್ಯಕಾರಿಯಿಂದ ಬೇರೆಯೇ ಇರುವುದರಿಂದ ಸಚಿವ ಸಂಪುಟವು ವಿಧಾನ ಮಂಡಲವನ್ನು ಕಾರ್ಯಿಕಾರಿಯಿಂದ ಬೇರ್ಪಡಿಸಲು ನಿರ್ಧರಿಸಿಲ್ಲ.

ಬಿ) ಪ್ರಶ್ನೆ ಉದ್ಭವಿಸುವುದಿಲ್ಲ.

ಸಿ) ಪ್ರಶ್ನೆ ಉದ್ಭವಿಸುವುದಿಲ್ಲ.

ವಿಷಯ : ರಾಜ್ಯದಲ್ಲಿ ಬಾಲ ಕಾರ್ಮಿಕರು ಕೆಲಸ ಮಾಡುತ್ತಿರುವ ಕೈಗಾರಿಕೆಗಳು

ಪ್ರಶ್ನೆ 11(38) ಶ್ರೀ ಪಿ. ರಾಮಚಂದ್ರ ರಾವ್ (ಉಲ್ಲಾಳ್).—ಮಾನ್ಯ ಕಾರ್ಮಿಕ ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ.—

ಅ) ನಮ್ಮ ರಾಜ್ಯದಲ್ಲಿ ಬಾಲಕಾರ್ಮಿಕರು ವಿಪುಲರಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ;

ಆ) ಹಾಗಿದ್ದಲ್ಲಿ ಇವರು ಯಾವ ಯಾವ ಕೈಗಾರಿಕೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ ಮತ್ತು ಅವರ ಸಂಖ್ಯೆ ಎಷ್ಟು ;

ಇ) ಇದನ್ನು ಸಂಪೂರ್ಣವಾಗಿ ನಿಲ್ಲಿಸಲು ಈಗಾಗಲೇ ಸರಕಾರದವರು ಕೈಗೊಂಡಿರುವ ಕ್ರಮಗಳೇನು ;

ಈ) ಇವರ ಆಹಾರ, ಆರೋಗ್ಯ ಮತ್ತು ವಿದ್ಯಾಭ್ಯಾಸಗಳಿಗಾಗಿ ಮಾಲಿಕರು ಜವಾಬ್ದಾರಿ ವಹಿಸುವಂತೆ ಸರಕಾರದವರು ಕೈಗೊಂಡ ಕ್ರಮಗಳೇನು ಮತ್ತು ಸರಕಾರದವರು ಕಾರ್ಮಿಕರ ಕಲ್ಯಾಣ ಕ್ಕಾಗಿ ಎಷ್ಟು ಹಣ ವೆಚ್ಚ ಮಾಡುತ್ತಿದ್ದಾರೆ ?

ಉತ್ತರ.—ಶ್ರೀ **ಅಜೀಜ್ ಸೇಟ್** (ಕಾರ್ಮಿಕ ಮತ್ತು ವಕ್ಫ್ ಮಂತ್ರಿಗಳು).—ಅ) ಹೌದು.

ಆ) ಶ್ರಮಿಕ ಮಕ್ಕಳ ಅಂಕಿ ಅಂಶಗಳು ಲಭ್ಯವಿಲ್ಲ. ಆದರೆ, ತಪಾಸಣೆ ಸಮಯದಲ್ಲಿ ವಿವಿಧ ಉದ್ಯೋಗಗಳಲ್ಲಿ ಮಕ್ಕಳು ಕೆಲಸ ಮಾಡುತ್ತಿರುವುದು ಗಮನಕ್ಕೆ ಬಂದಿರುತ್ತದೆ.

ಇ) ಕಾರ್ಮಿಕ ಇಲಾಖೆಯು ಬಾಲ ಕಾರ್ಮಿಕರ ವಿಭಾಗದ, ಕಾರ್ಮಿಕ ಅಧಿಕಾರಿ ಮತ್ತು ಇತರೆ ಕಾರ್ಮಿಕ ನಿರೀಕ್ಷಕರೊಂದಿಗೆ ವಿವಿಧ ಕಾರ್ಮಿಕ ಕಾನೂನುಗಳ ಉಪಬಂಧಗಳನ್ನು ಜಾರಿಗೊಳಿಸುತ್ತಿದ್ದಾರೆ ; ಈ) ಈ ಕಾರ್ಯಕ್ರಮಗಳು ಕಾರ್ಮಿಕ ಇಲಾಖೆಯ ವ್ಯಾಪ್ತಿಗೆ ಬರುವುದಿಲ್ಲ.

ಅಧ್ಯಕ್ಷರು.—ಈಗ ಕಾರ್ಯದರ್ಶಿಯವರು ವರದಿಯನ್ನು ಮಂಡಿಸುತ್ತಾರೆ

ಕಾರ್ಯದರ್ಶಿಯರ ವರದಿ

ಕಾರ್ಯದರ್ಶಿ.—ಕಳೆದ ಅಧಿವೇಶನದಲ್ಲಿ ವರದಿಯನ್ನೊಪ್ಪಿಸಿದ ನಂತರ ರಾಜ್ಯಪಾಲರಿಂದ ಅಥವಾ ರಾಷ್ಟ್ರಾಧ್ಯಕ್ಷರಿಂದ ಸಂದರ್ಭಾನುಸಾರ ಒಪ್ಪಿಗೆ ಪಡೆದ ವಿಧೇಯಕಗಳ ಪಟ್ಟಿಯನ್ನು ಸಭೆಯ ಮುಂದೆ ಇಡುತ್ತೇನೆ.

ಕ್ರಮ ಸಂಖ್ಯೆ	ವಿಧೇಯಕದ ಹೆಸರು	ಒಪ್ಪಿಗೆಯನ್ನು ಪಡೆದ ದಿನಾಂಕ	ಒಪ್ಪಿಗೆಯನ್ನು ನೀಡಿದವರು
೧	೧೯೮೨ನೇ ಇಸವಿಯ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ವರ್ಗದ (ತಿದ್ದುಪಡಿ) ವಿಧೇಯಕ	೨೮-೧೨-೧೯೮೨	ರಾಜ್ಯಪಾಲರು
೨	೧೯೮೨ನೇ ಇಸವಿಯ ಕರ್ನಾಟಕ ಭೂಸುಧಾರಣಾ (ಎರಡನೆಯ ತಿದ್ದುಪಡಿ) ವಿಧೇಯಕ	೩೦-೧೨-೧೯೮೨	»
೩	೧೯೮೨ನೇ ಇಸವಿಯ ಕರ್ನಾಟಕ ಮನರಂಜನಾ ತೆರಿಗೆ (ತಿದ್ದುಪಡಿ ವಿಧೇಯಕ)	೮-೧-೧೯೮೩	»
೪	೧೯೮೨ನೇ ಇಸವಿಯ ಕರ್ನಾಟಕ ಮಾರಾಟ ತೆರಿಗೆ (ತಿದ್ದುಪಡಿ) ವಿಧೇಯಕ	೧೩-೧-೧೯೮೩	»
೫	೧೯೮೨ನೇ ಇಸವಿಯ ಅರಸೀಕೆರೆ ಟೌನ್ ಪುರಸಭೆಗೆ (ಮೇರೆಯ ವಿಸ್ತರಣೆ) ಸಂಬಂಧಿಸಿದ ವಿಧೇಯಕ	೧೯-೨-೧೯೮೩	»
೬	೧೯೮೩ನೇ ಇಸವಿಯ ಕರ್ನಾಟಕ ರಾಜ್ಯದ ಹಣ ವಿನಿಯೋಗಕ್ಕೆ (ಲೇಖಾನುದಾನ) ಸಂಬಂಧಿಸಿದ ವಿಧೇಯಕ	೩೧-೩-೧೯೮೩	»
೭	೧೯೮೩ನೇ ಇಸವಿಯ ಕರ್ನಾಟಕ ರಾಜ್ಯದ ಹಣವಿನಿಯೋಗಕ್ಕೆ ಸಂಬಂಧಿಸಿದ ವಿಧೇಯಕ	೩೧-೩-೧೯೮೩	»
೮	೧೯೮೩ನೇ ಇಸವಿಯ ಕರ್ನಾಟಕ ಮನರಂಜನಾ ತೆರಿಗೆ (ತಿದ್ದುಪಡಿ) ವಿಧೇಯಕ	೧-೪-೧೯೮೩	»
೯	೧೯೮೩ನೇ ಇಸವಿಯ ಕರ್ನಾಟಕ ಮೋಟಾರು ವಾಹನಗಳ ತೆರಿಗೆಗೆ ಸಂಬಂಧಿಸಿದ (ತಿದ್ದುಪಡಿ) ವಿಧೇಯಕ	೧-೪-೧೯೮೩	»
೧೦	೧೯೮೩ನೇ ಇಸವಿಯ ಕರ್ನಾಟಕ ಅರಣ್ಯ (ತಿದ್ದುಪಡಿ) ವಿಧೇಯಕ	೧-೪-೧೯೮೩	»
೧೧	೧೯೮೩ನೇ ಇಸವಿಯ ಕರ್ನಾಟಕ ಗ್ರಾಮಪಂಚಾಯಿತಿಗಳ ಹಾಗೂ ಸ್ಥಳೀಯ ಮಂಡಳಿಗಳ (ತಿದ್ದುಪಡಿ) ವಿಧೇಯಕ	೧೮-೪-೧೯೮೩	»
೧೨	೧೯೮೩ನೇ ಇಸವಿಯ ಕರ್ನಾಟಕ ನಗರಸಭೆಗಳ (ತಿದ್ದುಪಡಿ) ವಿಧೇಯಕ	೨೬-೪-೧೯೮೩	»